# ದೃಷ್ಟಿ ನಿನ್ನ ಪಾದದಲ್ಲಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 289.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 426.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 105.
4. **Note:** After going through all the lyrics, I have arrived at the following wordings as most apt and to be followed. These are given without highlights. Here, the wordings are a mix of all the three reference books cited above.
5. **Note:** Lyrics mentioned in green highlights are as per Ref. 1. The wordings in Ref. 2 are similar to Ref. 2 with few differences which are in blue highlights. The wordings in Ref. 3 are almost same as in Ref. 1 with minor changes. Main difference here is given in yellow highlights.
6. **Note:** Singer has followed lyrics as in Ref. 1.

ರಾಗ: ಶಂಕರಾಭರಣ ತಾಳ: ಆದಿ

ದೃಷ್ಟಿ ನಿನ್ನ ಪಾದದಲ್ಲಿ ನೆಡೊ ಹಾಂಗೆ,
ದುಷ್ಟ ಜನ ಸಂಗಗಳ ಬಿಡೋ ಹಾಂಗೆ || ಪ ||

ಕೆಟ್ಟ ಮಾತು ಕಿವಿಯಿಂದ ಕೇಳದ್ಹಾಂಗೆ, ಮನ
ಕಟ್ಟಿಸಯ್ಯ ನಿನ್ನ ಪಾದ ಬಿಡದ್ಹಾಂಗೆ || ಅಪ ||

ದಿಟ್ಟನಾಗಿ ಕೈಯನೆತ್ತಿ ಕೊಡೊ ಹಾಂಗೆ, ಶ್ರೀ
ಕೃಷ್ಣ ನಿನ್ನ ಪೂಜೆಗಳ ಮಾಡೊ ಹಾಂಗೆ
ಭ್ರಷ್ಟನಾಗಿ ನಾಲ್ವರೊಳು ತಿರುಗದ್ಹಾಂಗೆ, ಬಲು
ಶಿಷ್ಟಜನ ಸೇವೆಯನು ಮಾಡೊ ಹಾಂಗೆ || ೧ ||

ಪುಟ್ಟಿಸಿದ ತಾಯಿ ತಂದೆಯಲ್ಲೊ ನೀನು, ಒಂದು

ಹೊಟ್ಟೆಗಾಗಿ ದೈನ್ಯ ಪಡಲಾರೆ ನಾನು
ಪಟ್ಟೆ ಪಟ್ಟಾವಳಿ ಬೇಡಲಿಲ್ಲ ನಾನು, ಎನ್ನ
ಗುಟ್ಟು ಅಭಿಮಾನಗಳ ಕಾಯೊ ನೀನು || ೨ ||

ನಟ್ಟ ನೀರೊಳಗೆ ಈಸಲಾರೆ ನಾನು, ಎತ್ತಿ
ಕಟ್ಟೆ ಸೇರಿಸ ಬೇಕಯ್ಯಾ ನೀನು
ಬೆಟ್ಟದಂಥ ಪಾಪಗಳ ಹೊತ್ತಿರುವೆ ನಾನು, ಅದ
ಸುಟ್ಟು ಬಿಡು ಪುರಂದರ ವಿಠಲ ನೀನು || ೩ ||

**Note:** Below mentioned lyrics are as per the reference books cited above.

ರಾಗ: ಶಂಕರಾಭರಣ ತಾಳ: ಆದಿ

ದೃಷ್ಟಿ ನಿನ್ನ ಪಾದದಲ್ಲಿ ನೆಡೊ ಹಾಗೆ, ಧರೆ
ದುಷ್ಟ ಜನ ಸಂಗಗಳ ಬಿಡೋ ಹಾಗೆ
ಕೆಟ್ಟ ಮಾತು ಕಿವಿಯಿಂದ ಕೇಳದ್ಹಾಗೆ, ಮನ
ಕಟ್ಟಿ ಸದಾ ನಿನ್ನ ಧ್ಯಾನ ಬಿಡದ್ಹಾಗೆ || ಪ ||

ದಿಟ್ಟನಾಗಿ ಕೈಯನೆತ್ತಿ ಕೊಡೊ ಹಾಗೆ, ಶ್ರೀ (ದೃಷ್ಟನಾಗಿ ಕೈಯನೆತ್ತಿ ಕೊಡೊ ಹಾಗೆ)
ಕೃಷ್ಣ ನಿನ್ನ ಪೂಜೆಯನು ಮಾಡೋ ಹಾಗೆ
ಭ್ರಷ್ಟನಾಗಿ ನಾಲ್ವರೊಳು ತಿರುಗದ್ಹಾಗೆ, ಬಲು
ಶಿಷ್ಟ ಜನ ಸೇವೆಯನು ಮಾಡೋ ಹಾಗೆ || 1 ||

ಪುಟ್ಟಿಸಿದ ತಾಯಿ ತಂದೆಯಲ್ಲೊ ನೀನು, ಒಂದು
ಹೊಟ್ಟೆಗಾಗಿ ದೈನ್ಯಪಡಬೇಕೆ ನಾನು
ಪಟ್ಟೆ ಪಟ್ಟಾವಳಿ ಬೇಡಲಿಲ್ಲ ನಾನು, ಎನ್ನ
ಗುಟ್ಟು ಅಭಿಮಾನಗಳ ಕಾಯೊ ನೀನು || 2 ||

ನಟ್ಟ ನೀರೊಳಗೆ ಈಸಲಾರೆ ನಾನು, ಎತ್ತಿ (ನಟ್ಟನಡು ನೀರೋಳಿಸಲಾರೆ ನಾನು, ಎತ್ತಿ)
ಕಟ್ಟೆ ಸೇರಿಸ ಬೇಕಯ್ಯಾ ನೀನು
ಬೆಟ್ಟದಂಥ ಪಾಪಗಳ ಹೊತ್ತಿರುವೆ ನಾನು, ಅದ (ಕಟ್ಟೆ ಕಾಣದೆ ಅಲ್ಲಾಡುವೆನು ನಾನು, ಕೈಯ)
ಸುಟ್ಟು ಬಿಡು ಪುರಂದರ ವಿಠಲ ನೀನು || 3 || (ಬಿಟ್ಟು ನೋಡುವರೆ ಪುರಂದರ ವಿಠ್ಠಲ ನೀನು)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಧೃಷ್ಟನಾಗಿ** = ಧೈರ್ಯಶಾಲಿಯಾಗಿ

**ಭ್ರಷ್ಟ** = ಆಚಾರ - ವಿಚಾರ ಹೀನ

**ಶಿಷ್ಟಜನ** – ಸಾಧುಸಜ್ಜನರು, ಸದಾಚಾರಸಂಪನ್ನರು.

**ಪಟ್ಟೆ ಪಟ್ಟವಾಳಿ** – ರೇಷ್ಮೆಯ ಉಡುಪು, ಪಟ್ಟಸೀರೆ.

**ಗುಟ್ಟು ಅಭಿಮಾನಿಗಳ** – ಏಕಾಂತ ಭಕ್ತರನ್ನು.

**ಕಟ್ಟೆ** – ದಡ.

**Classification:** Keerthane
**Ankita:** purandara vittala
**Location:** NA
**Category:** Bhakti, Jeevanoddhara
**Sub-Category:** bhumi, jana, kivi, mana, Dhyana, kai, Krishna, puje, tayi, tande, dainya, abhimana, niru, parvata, papa,
**Pravachana:**
**Explanation:** NA